**<u>ಸಾಕ್ಷಿಗೆ ದಿನಾಂಕ 26-03-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ.ಎಂ ಇ ಎಂ ವಕೀಲರಿಂದ:</u>**

1. ನನ್ನ ಮೃತ ಮಗಳು ಎಸ್ ಬಿ ಐ ಬ್ಯಾಂಕ್ ಖಾತೆಯನ್ನು ತುಮಕೂರಿನ ಸದಾಶಿವನಗರ ಶಾಖೆಯಲ್ಲಿ ಹೊಂದಿದ್ದಳು. ಸದರಿ ಬ್ಯಾಂಕ್ ಖಾತೆಯ ಸ್ಟೇಟ್ ಮೆಂಟ್ ಹಾಜರುಪಡಿಸಬಹುದ ಎಂದರೆ ಬ್ಯಾಂಕ್ ಖಾತೆ ರದ್ದುಗೊಂಡಿರುತ್ತದೆ. ಮೂರನೇ ಎದುರುದಾರರು ನನ್ನ ಮೃತ ಮಗಳ ವಿವಾಹ ವಿಚ್ಛೇದನಾ ಕೋರಿ ತುಮಕೂರು ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಸದರಿ ಅರ್ಜಿ ವಿಲೇವಾರಿಗೊಂಡಿರಲಿಲ್ಲ. ಮೃತ ಮಗಳಿಗೆ ಮಕ್ಕಳಿರಲಿಲ್ಲ. ನಾನು ಮತ್ತು ನನ್ನ ಮಗ ಮಾತ್ರ ಈಗ ಕುಟುಂಬದ ಸದಸ್ಯರಾಗಿದ್ದೇವೆ ಎಂದು ತೋರಿಸಲು ವಂಶವೃಕ್ಷ ದೃಢೀಕರಣ ಪತ್ರ ಹಾಜರುಪಡಿಸಬಹುದು ಎಂದರೆ ಸರಿ.

2. ಅಪಘಾತದ ಬಗ್ಗೆ ಮಾಹಿತಿ ನೀಡಿದವರ ಹೆಸರು ನನಗೆ ಗೊತ್ತಿಲ್ಲ. ನನ್ನ ಮಗಳನ್ನು ತುಮಕೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ದೂರದಿಂದ ನೋಡಿರುತ್ತೇನೆ. ಸದರಿ ಆಸ್ಪತ್ರೆಯವರು ನನ್ನ ಅಥವಾ ನನ್ನ ಮಗನ ಹೇಳಿಕೆ ಪಡೆದಿರುವುದಿಲ್ಲ. ನಾನು ಅಪಘಾತದ ಸ್ಥಳವನ್ನು ನೋಡಿರುವುದಿಲ್ಲ. ಅಪಘಾತವು ಟ್ರಾಕ್ಟರ್ ಚಾಲಕನ ತಪ್ಪಿನಿಂದ ಆಗಿದ್ದು, ಅಂಬ್ಯುಲೆನ್ಸ್ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಅಂಬ್ಯುಲೆನ್ಸ್ ಚಾಲಕನ ತಪ್ಪಿನಿಂದ ಆಗಿರುತ್ತದೆ. ಟ್ರಾಕ್ಟರ್ -ಟ್ರೇಲರ್ ವಾಹನಕ್ಕೆ ಅಪಘಾತದ ಕಾಲಕ್ಕೆ ವಿಮೆ ಪಾಲಿಸಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಟ್ರಾಕ್ಟರ್ -ಟ್ರೇಲರ್ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿದ್ದರೂ ಸಹ, ಸದರಿ ಟ್ರಾಕ್ಟರ್ -ಟ್ರೇಲರ್ ಗೆ ವಿಮೆ ಪಾಲಿಸಿ ಇಲ್ಲದೇ ಇರುವುದರಿಂದ ಅಪಘಾತವು ಅಂಬ್ಯುಲೆನ್ಸ್ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದು ಪೋಲೀಸರೊಂದಿಗೆ ಶಾಮೀಲಾಗಿ ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿರುವುದಿಲ್ಲ. ಪೋಲೀಸರಿಗೆ ದೂರನ್ನು ರೋಗಿಯ ಕಡೆಯವರು ನೀಡಿರುತ್ತಾರೆ. ಪೊಲೀಸರು ಎರಡು ವಾಹನಗಳ ಮೇಲೆ ದೋಷಾರೋಪಣಾಪಟ್ಟಿ ಸಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗ ಒಮ್ಮೊಮ್ಮೆ ಕೂಲಿ ಕೆಲಸ ಮಾಡುತ್ತಾನೆ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾ**ಟೀ ಸವಾಲು: 3 ನೇ ಎದುರುದಾರರ ಪರ ವಕೀಲರು ಕಾಲಾವಕಾಶ ಕೋರಿರುತ್ತಾರೆ. ಸಾಕ್ಷಿಯು ದೂರದ ಊರಿನಿಂದ ಬಂದಿರುವುದರಿಂದ ರೂ.1,000/- ಖರ್ಚು ಸಹಿತ** ಪಾ**ಟೀಸವಾಲಿಗೆ ಕಾಲಾವಕಾಶವನ್ನು ನೀಡಲಾಗಿರುತ್ತದೆ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**
**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**